ಸಿ.ಸಿ..ನಂ.68/2023
ಪಿ.ಡಬ್ಲ್ಯೂ-1

ದಿನಾಂಕ.28-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ.ಎನ್ ಎನ್ ವಕೀಲರಿಂದಃ**

1. ನಾನು ಕೃತ್ಯ ನಡೆಯಿತು ಎನ್ನಲಾದ ದಿನ ಬೆಳಿಗ್ಗೆ 9-00 ಗಂಟೆಯಿಂದ ಕರ್ತವ್ಯದಲ್ಲಿ ಇದ್ದೆ. ಆ ದಿನ ನಾನು ಹೆಬ್ಬುಳ ಅರಣ್ಯ ಸರ್ವೆ ನಂ 72 ರಲಿಲ ಕರ್ತವ್ಯ ದಲ್ಲಿ ಇದ್ದೆ . ನಾನು ಆ ದಿನ ಕರ್ತವ್ಯ ದಲ್ಲಿ ಇದ್ದ ಬಗ್ಗೆ ಇಲಾಖಾ ದಾಖಲೆಗಳಲ್ಲಿ ನಮೂದು ಇರುತ್ತದೆ ಎಂದರೆ ಸರಿ . ಆ ದಿನ ನಾನು ಕತರ್ವ್ಯಕ್ಕಾಗಿ ಸರಕಾರ ಇಲಾಖೆಯಿಂದ ಕೊಟ್ಟಿರುವ ಬೈಕ ನಲ್ಲಿ ಕರ್ತವ್ಯಕ್ಕೆ ಹೋಗಿರುತ್ತೇನೆ ಮತ್ತು ಕೆಲವೊಂದು ಕಡೆ ನಡೆದುಕೊಂಡು ಕರ್ತವ್ಯ ನಿರ್ವಹಿಸುತ್ತಿರುತ್ತೇನೆ . ಆ ದಿನ ಕರ್ತವ್ಯಕ್ಕೆ ಹೋದೆನು ಎಂದು ಹೇಳಿದಂತೆ ಪಂಚನಾಮೆಯಲ್ಲಿ ನೀವು ಸರಕಾರ ಇಲಾಖೆಯ ಬೈಕನಲ್ಲಿ ಕರ್ತವ್ಯ ಕ್ಕೆ ಹೋಗಿದ್ದೆ ಇಲ್ಲ . ಈಗ ಹೇಳಿದಂತೆ ನಮೂದು ಮಾಡಿಲ್ಲ ಎಂದರೆ ಬೆಳಿಗ್ಗೆ ನಾನು ಸರಕಾರ ಇಲಾಖೆಯಿಂದ ನೀಡಿದ ಬೈಕ ನಲ್ಲಿ ಹೋಗಿದ್ದೆ . ಅದರೆ ಈ ಪ್ರಕರಣವು ನಡೆದ ಸಮಯದಲ್ಲಿ ನಾನು ಇಲಾಖಾ ಜೀಪ ನಲ್ಲಿ ಹೋಗಿದ್ದೆ . ಅದನ್ನು ಪಂನಚನಾಮೆಯಲ್ಲಿ ನಮೂದಿಸಲಾಗಿರುತ್ತದೆ . ಪಂಚನಾಮೆಯಲ್ಲಿ ಸದ್ರಿ ಇಲಾಖೆ ಜೀಪನ ನಂಬರ ನಮೂದಿಸಿಲ್ಲ ಎಂದರೆ ಸರಿಯಲ್ಲ . ಅದನ್ನು ನಮೂದಿಸಲಾಗಿರುತ್ತದೆ . ಸಾಕ್ಷಿಗೆ ಪುನಃ ಪಂಚನಾಮೆ ತೋರಿಸಲಾಗಿ ಇದರಲ್ಲಿ ಇಲಾಖಾ ಜೀಪನ ನಂಬರ ನಮೂದು ಮಾಡಲಾಗಿರುತ್ತದೆಯಾ ಎಂದು ಪುನಃ ಕೇಳಿದಾಗ ಇಲ್ಲ ಎಂದು ನುಡಿಯುತ್ತಾರೆ . ಗಸ್ತು ಕರ್ತವ್ಯದಲ್ಲಿ ಇದ್ದ ಬೈಕ ಕಂಪನಿ ಹೆಸರಾಗಲಿ ಅಥವಾ ಬೈಕ ನಂಬರವಾಗಲಿ ಪಂಚನಾಮೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ . ಬಾತ್ಮಿ ಬರುವ ಪೂರ್ವದಲ್ಲಿ ಬೆಳಿಗ್ಗೆ 9-00 ಗಂಟೆಯಿಂದ 1 ತಾಸಿನ ಅವಧಿಯಲ್ಲಿ ಅಂದರೆ 10-00 ಗಂಟೆ ವರೆಗೆ ನಾನು ಗಸ್ತು ಕರ್ತವ್ಯ ಮಾಡಿರುತ್ತೇನೆ . ನಮ್ಮ ವಸತಿ ಗೃಹ ಸುಂಕಸಾಳದಲ್ಲಿ ಇರುತ್ತದೆ . ನಮ್ಮ ವಸತಿ

ಗೃಹದಿಂದ ನಮ್ಮ ಕಚೇರಿಯು ಅಂದಾಜು 9 ರಿಂದ 10 ಕಿ ಮೀ ಆಗುತ್ತದೆ . ನೀವು ಗಸ್ತಿಗೆ ಹೋಗುವಾಗ ನಿಮ್ಮ ಠಾಣೆಯಲ್ಲಿ ಯಾವ ಕಡೆಗೆ ಗಸ್ತಿಗೆ ಹೋಗುತ್ತೀರಿ ಎಂದು ನಮೂದು ಮಾಡಿ ಹೋಗುತ್ತೀರಾ ಎಂದರೆ ಆ ರೀತಿ ಇಲ್ಲ . ನನಗೆ ಬಾತ್ಮಿದಾರರಿಂದ ಮಾಹಿತಿಯು ನೇರವಾಗಿ ಬಂದಿರುತ್ತದೆ . ಅವರು ನೇರವಾಗಿ ನನ್ನ ಬಳಿ ಹೇಳಿರುತ್ತಾರೆ ಅವರು ಎಲ್ಲಿಯವರು ಎಂದು ಪಂಚನಾಮೆಯಲ್ಲಿ ನಮೂದಿಸಿಲ್ಲ ಏಕೆಂದರೆ ಅದನ್ನು ಗೌಪ್ಯವಾಗಿ ಇಡಲಾಗುತ್ತದೆ . ನನ್ನ ಬಳಿಯಲ್ಲಿ ಎನರೊಯಡ ಮೊಬೈಲ 5-6 ವರ್ಷಗಳಿಂದ ಬಳಕೆಯಲ್ಲಿರುತ್ತದೆ . ಗದ್ದೆ ಎಂದರೆ ಗೊಬ್ಬರವನ್ನು ಹಾಕಿ ಅದರಲ್ಲಿ ಬೆಳೆಯ ಬೀಜವನ್ನು ಹಾಕಿ ಫಸಲನ್ನು ಪಡೆಯುವ ಪ್ರದೇಶ ಎಂದರೆ ಸರಿ. ಗದ್ದೆಯಲ್ಲಿ ನಾನು ನೋಡುವ ಸಮಯದಲ್ಲಿ ಯಾವುದೆ ಬೆಳೆ ಬೆಳೆಯಲಿಲ್ಲ ಅಲ್ಲಿ ಹುಲ್ಲು ಇತ್ತು . ಕಾಡು ಪ್ರದೇಶ ಎಂದರೆ ಗಿಡ ಗಂಟೆಗಳು ದೊಡ್ಡ ದೊಡ್ಡ ಮರಗಳು ಇರುವ ಪ್ರದೇಶ ಎಂದರೆ ಸರಿ . ನೀವು ಹೋಗಿದ್ದೀರಿ ಎಂದು ಹೇಳಲಾದ ಪ್ರದೇಶವು ಸುತ್ತ ಮುತ್ತಲು ಮನೆ ಮತ್ತು ಜನವಸತಿ ಇರುವ ಪ್ರದೇಶ ಎಂದರೆ ಸರಿ . ಅಲ್ಲಿ ಗ್ರಾಮದ ಜನರು ರೈತಾಪಿ ಮತ್ತು ತೋಟದ ಕೆಲಸ ವನ್ನು ಮಾಡುವ ಜನರಾಗಿರುತ್ತಾರೆ ಎಂದರೆ ಸರಿ . ನಮ್ಮ ಇಲಾಖೆಯಲ್ಲಿ ಬಂದೂಕುಗಳು ಯಾವ ರೀತಿಯಾಗಿ ಇರುತ್ತವೆ ಎಂದು ಗುರುತಿಸುವ ತರಬೇತಿ ಇರುತ್ತದೆ ಎಂದರೆ ಸರಿ . ನಾಡಬಂದುಕುಗಳು ಎಂದರೆ ಅವುಗಳಿಗೆ ಲೈಸೆನ್ಸ ಇರುವುದಿಲ್ಲ ಎಂದರೆ ಸರಿ . ನಾಡಬಂದೂಕಗಳಲ್ಲಿ ಗುಂಡುಗಳನ್ನು ಹಾಕುವುದಿಲ್ಲ ಅವುಗಳಲ್ಲಿ ಮನುಷ್ಯನೆ ರೆಡಿ ಮಾಡಿದ ಪರಿಕರ ಹಾಕಿ ತುಂಬ ಬೇಕಾಗುತ್ತದೆ ಎಂದರೆ ಸರಿ . ನಾಡಬಂದೂಕುಗಳ ವಿನ್ಯಾಸ ಹಾಗೂ ಪರವಾನಿಗೆ ಪಡೆದ ಬಂದೂಕುಗಳ ವಿನ್ಯಾಸ ಬೇರೆಬೇರೆ ಯಾಗಿರುತ್ತದೆ ಮತ್ತು ಅವುಗಳನ್ನು ನೋಡಿದ ತಕ್ಷಣ ವಿನ್ಯಾಸದ ವ್ಯತ್ಯಾಸ ಗೊತಾಗುತ್ತದೆ ಎಂದರೆ ಸರಿ . ಅಧಿಕೃತ ಬಂದೂಕುಗಳು ಎಂದರೆ ಪರವಾನಿಗೆ ಪಡೆದಂತಹ ಬಂದೂಕುಗಳು ಮತ್ತು ಅನಧಿಕೃತ ಬಂದೂಕುಗಳು ಎಂದರೆ ಪರವಾನಿಗೆ ಪಡೆಯದೆ ಇರುವಂತಹ ಬಂದುಕುಗಳು ಎಂದರೆ ಸರಿ . ಚಾಸಾ-3 ಮತ್ತು 4 ರವರು ನಿಮ್ಮ ಇಲಾಖೆಯ ದಿನಗೂಲಿ ನೌಕರರು ಎಂದರೆ ಸರಿಯಲ್ಲ .

2. ನಮ್ಮ ಇಲಾಖೆಯಲ್ಲಿ ಒಟ್ಟು ಎಷ್ಟು ಜನ ಸಿಬ್ಬಂದಿಗಳು ಇರುತ್ತಾರೆ ಎಂದರೆ ನಿಖರವಾಗಿ ಹೇಳಲಾಗುವುದಿಲ್ಲ . ನಮ್ಮ ಶಾಖೆಯಲ್ಲಿ 4 ಜನ ಸಿಬ್ಬಂದಿಗಳು ಇರುತ್ತೇವೆ . ಚಾಸಾ -3 ಮತ್ತು 4 ರವರು ನಿಮ್ಮ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಕರ್ತ್ಯವ ನಿವರ್ಹಿಸುತ್ತಿದ್ದಾರೆ ಆದರೂ ನೀವು ಇಲ್ಲ ಎಂದು ಸುಳ್ಳು ಹೆಳುತ್ತಿದ್ದೀರಿ ಎಂದರೆ ಸರಿಯಲ್ಲ .

3. ಬಾತ್ಮಿ ಬಂದ ನಂತರ ನಾನು ನನ್ನ ಮೇಲಾಧಿಕಾರಿಗೆ ತಿಳಿಸಿ ಶೋಧನಾ ವಾರಂಟಿ ನ್ನು ACF ರವರು RFO ರವರಿಗೆ ಕೊಟ್ಟಿರುತ್ತಾರೆ ಅದನ್ನು ನಾನು ಶೋಧನಾ ವಾರಂಟನ್ನು ಕೊಡಬೇಕು ಎಂದು RFO ರವರಿಗೆ ಪೋನ ಮುಖಾಂತರ ತಿಳಿಸಿರುತ್ತೇನೆ ಅವರು ಆಗ ಎಲ್ಲಿದ್ದರೂ ಎಂದು ನನಗೆ ಗೊತ್ತಿಲ್ಲ . RFO ರವರು ACF ರವರಿಗೆ ಯಾವಾಗ ಶೋಧನಾ ವಾರಂಟ ಕೊಡಬೇಕು ಎಂದು ಕೇಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ಶೋಧನಾ ವಾರಂಟ ವನ್ನು ACF ರವರು RFO ರವರಿಗೆ ಎಷ್ಟು ಗಂಟೆಗೆ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ACF ರವರು RFO ರವರಿಗೆ ನೀಡಿದ ಶೊಧನಾ ವಾರಂಟ ನ್ನು ನಾನು ಕೇಳಿ ಪಡೆದು ಕೊಂಡಿಲ್ಲ .

4. ನನಗೆ ಬಾತ್ಮಿದಾರರ ಮುಖಾಂತರ ಮಾಹಿತಿಯು ಯಾವುದೊ ಕಾಡು ಪ್ರಾಣಿಯನ್ನು ಬೇಟೆಯಾಗಿ ಇಟ್ಟಿರುವ ಮಾಂಸ 1 ನೆ ಆರೋಪಿ ಮನೆಯಲ್ಲಿ ಇರುತ್ತದೆ ಎಂದು ಬಾತ್ಮಿ ಬರುತ್ತದೆ . ನಿಮಗೆ ನ್ಯಾಯಾಲಯದಿಂದ ಶೊಧನಾ ವಾರಂಟ ಪಡೆದು ಕೊಳ್ಳಲು ತೊಂದರ ಇರಲಿಲ್ಲ ಎಂದರೆ ನನ್ನ ಇಲಾಖೆಯಲ್ಲಿ ವನ್ಯ ಜೀವಿ ಸಂರಕ್ಷಣಾ ಕಾಯ್ದೆ ಪ್ರಕಾರ ACF ರವರಿಂದ ಶೊಧನಾ ವಾರಂಟ ನ್ನು ಪಡೆದುಕೊಳ್ಳುವ ಅವಕಾಶ ಇರುತ್ತದೆ . ನೀವು ಅರೋಪಿತರ ವಿರುದ್ದ ಪ್ರಕರಣ ಸೃಷ್ಟಿ ಮಾಡಬೇಕು ಎಂಬ ಉದ್ದೇಶದಿಂದ ನ್ಯಾಯಾಲಯದಿಂದ ಶೋಧನಾ ವಾರಂಟ ನ್ನು ಪಡೆದು ಕೊಳ್ಳದೆ ಅಲ್ಲಲ್ಲಿಯೇ ನೀವುಗಳೆ ಹೊಂದಾಣಿಕೆ ಮಾಡಿಕೊಂಡು ಆ ರೀತಿಯಾದಂತಹ ಶೋಧನಾ ವಾರಂಟನ್ನು ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ .

5. ಶೋಧನಾ ವಾರಂಟ ನನಗೆ ಬೆಳಿಗ್ಗೆ 11-30 ಗಂಟೆ ಗೆ ಬಂದಿರುತ್ತದೆ . ಶೋಧನಾ ವಾರಂಟ್ ನ್ನು ನಾನೆ ಪಡೆದುಕೊಂಡು ಬಂದಿರುತ್ತೇನೆ . ನಾನು ಸದ್ರಿ ಶೊಧನಾ ವಾರಂಟನ್ನು ವಲಯ ಅರಣ್ಯಾಧಿಕಾರಿ ಕಚೇರಿ ಮಾಸ್ತಿ ಕಟ್ಟಾದಿಂದ ಪಡೆದು ಕೊಡು ಬಂದಿರುತ್ತೇನೆ . ಮಾಸ್ತಿಕಟ್ಟಾ ವಲಯ ಅರಣ್ಯಾಧಿಕಾರಿ ಕಚೇರಿಯು ಹೆಬ್ಬುಳದಿಂದ 4-5 ಕಿಮೀ ದೂರವಾಗುತ್ತದೆ . ಮಾಸ್ತಿಕಟ್ಟಾಗೆ ಆ ದಿನ ನಾನು ಒಬ್ಬನೆ ಹೋಗಿರುತ್ತೇನೆ . ಆ ದಿನ ನನ್ನ ಪ್ರಕಾರ ಮಾಸ್ತಿಕಟ್ಟಾ ವಲಯ ಅರಣ್ಯಾಧಿಕಾರಿ ಕಚೇರಿಯಲ್ಲಿ ಆನಂದ ನಾರಾಯಣ ಪತ್ತಿ ಹಾಗೂ RFO ರವರು ಇದ್ದರು. ಶೊಧನಾ ಸಮುಚಿತ ವಾರಂಟನ್ನು ಪಡೆದುಕೊಡು ವಲಯ ಅರಣ್ಯಾಧಿಕಾರಿ ಕಚೆರಿಯಿಂದ ವಾಪಸ್ಸು ಬರುವಾಗ ನನ್ನ ಜೊತೆ ಬೇರೆ ಯಾರು ಬಂದಿಲ್ಲ ನಾನು ಒಬ್ಬನೆ ಬಂದಿರುತ್ತೇನೆ . ಶೋಧನಾ ವಾರಂಟ ನ್ನು ಪಡೆದು ಕೊಂಡ ನಂತರ ನಾನು ನನ್ನ ಗಾರ್ಡ , ಹಾಗೂ ಪಂಚರು ಮತ್ತು ನಾಗಪ್ಪ ಗಿರಿಯಾ ನಾಯ್ಕ ಇವರುಗಳು ಸೇರಿ ಕೊಂಡು 1 ನೆ ಆರೋಪಿ ಮನಗೆ ಹೋಗಿರುತ್ತೇವೆ . ನಾಗಪಾ ಗಿರಿಯಾ ನಾಯ್ಕ ನನ್ನ ಜೊತೆ ಬರಲು ನಮ್ಮ ಗಾರ್ಡ ರಾದ ಚಾಸಾ -2 ರವರು ತಿಳಿಸಿರುತ್ತಾರೆ . ನಾಗಪ್ಪಾ ಗಿರಿಯಾ ನಾಯ್ಕ ಹೆಬ್ಬುಳದ ಶಾಲೆ ಬಳಿ ಬಂದಿರುತ್ತಾನೆ . ಪಂಚರನ್ನು ಕರೆಯಲು ನಾನೆ ಹೋಗಿದ್ದೆ . ನಾಗಪ್ಪಾ ಗಿರಿಯಾ ನಾಯ್ಕ ರವರನ್ನು ಅಲ್ಲಿಯೇ ನಿಲ್ಲಿಸಿದ್ದೆ . ಚಾಸಾ -3 ರವರ ಮನೆ ಸದ್ರಿ ಹೆಬ್ಬುಳದ ಶಾಲೆ ಬಳಿಯಿಂದ ಅರ್ಧ ಕಿ ಮಿ ದೂರವಾಗುತ್ತದೆ . ಚಾಸಾ -4 ರವರ ಮನೆ ಅಂದಾಜು 200 ಮೀಟರ ದೂರವಾಗುತ್ತದೆ . ನಾಗಪ್ಪಾ ಗಿರಿಯಾ ನಾಯ್ಕ ನಾನು ವಾಪಸ್ಸು ಬಂದಾಗ ಹೆಬ್ಬುಳದ ಶಾಲೆ ಬಳಿ ನಿಂತು ಕೊಂಡಿದ್ದ . ನಾನು ಪಂಚರನ್ನು ಕರೆದು ಕೊಂಡು ಬರಲು ಚಾಸಾ-3 ರವರ ಮೆನೆಗೆ ಮೊದಲು ಹೋಗಿದ್ದೆ ನಂತರ ಚಾಸಾ -4 ರವರ ಮನೆ ಗೆ ಹೋಗಿದ್ದೆ. ಪಂಚರನ್ನು ಕರೆದುಕೊಂಡು ಹೆಬ್ಬುಳದ ಶಾಲೆ ಬಳಿ ಬಂದಾಗ ಮದ್ಯಾಹ್ನ 12-20 ಆಗಿತ್ತು .ಆ ನಂತರ ದಲ್ಲಿ ನಾನು 1 ನೆ ಆರೊಪಿ ಮನೆಗೆ ಹೋಗಿ ಶೊಧನಾ ವಾರಂಟ ತೋರಿಸಿ ಶೋಧಿಸಲು 1 ನೆ ಆರೋಪಿ ಮನೆ ಒಳಗಡೆ ಹೋಗಿರುತ್ತೇನೆ . ಇಲಾಖಾ ಜೀಪನ್ನು ಪ್ರದೀಪ ಎಂಬ ಚಾಲಕನು ಚಾಲನೆ ಮಾಡಿರುತ್ತಾನೆ ಸದ್ರಿ ಇಲಾಖಾ ಜೀಪನ್ನು ಮಾಸ್ತಿಕಟ್ಟಾ ವಲಯ

ಅರಣ್ಯಾಧಿಕಾರಿ ಕಚೇರಿ ಯಿಂದ ಪಡೆದು ಕೊಂಡು ಬರಲಾಗಿರುತ್ತದೆ . ಆ ಜೀಪನ್ನು ಪ್ರದೀಪ ಚಾಲನೆ ಮಾಡುತ್ತಿದ್ದ ಮತ್ತು ಆ ಜೀಪನ್ನು ಅವನೆ ತಂದಿದ್ದ ಎಂದು ತೋರಿಸಲು ಪಂಚನಾಮೆಯಲ್ಲಿ ಅದರ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ .

6. ನಾನು ಕೃತ್ಯ ನಡೆಯಿತು ಎಂದು ಹೇಳಲಾದ ಸ್ಥಳಕ್ಕೆ ಹೋದಾಗ ಅಲ್ಲಿ ಒಟ್ಟು 5 ಜನ ಇದ್ದೆವು . ನಾನು ಆ ದಿನ 1 ನೆ ಅರೋಪಿ ಮನೆಯ ಒಳಗಡೆ 1 ನೆ ಅರೊಪಿ ಯೊಂದಿಗೆ ಹೋಗಿರುತ್ತೇನೆ . ಆ ಮನೆಯಲ್ಲಿ ಸುಮಾರು ಎಷ್ಟು ಕೋಣೆಗಳು ಇರುತ್ತವೆ ಎಂದು ಸರಿಯಾಗಿ ನೆನಪಿಲ್ಲ . ನೀವು ಹಾಜರ ಪಡಿಸಿದ ಪೊಟೊಗಳು ನಿಪಿ–3 ರಿಂದ 5 ಯಾವುದು ಕೂಡ ಮೂಲ ದಾಖಲಾತಿಗಳು ಅಲ್ಲ ಎಂದರೆ ಸರಿಯಲ್ಲ . ನೀವು ಪೊಟೊ ಜೆರಾಕ್ಸ ಪ್ರತಿ ಹಾಜರ ಪಡಿಸಿದ್ದು ಪೊಟೊ ದ ಮೂಲ ದಾಖಲಾತಿಗಳು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . ಆ ದಿವಸ ನಾನು ಸಮವಸ್ತ್ರದಲ್ಲಿ ಇದ್ದೆ . ನನ್ನ ಸಮವಸ್ತ್ರ ಬಣ್ಣ ಈ ದಿನ ಹಾಕಿ ಕೊಂಡ ಖಾಕಿ ಬಣ್ಣದ್ದು ಆಗಿರುತ್ತದೆ . ಸದ್ರಿ ಮಾಂಸವನ್ನು ಬೆಡ ರೂಮದಲ್ಲಿ ಇಡಲಾಗಿತ್ತು . ಸದ್ರಿ ಮಾಂಸವನ್ನು ಮಂಚದ ಕೆಳಗಡೆ ಇಡಲಾಗಿತ್ತು ಎಂಬ ಬಗ್ಗೆ ಯಾವುದೇ ಪೊಟೊ ದಲ್ಲಿ ಇಲ್ಲ ಎಂದರೆ ಪೊಟೊ ದಲ್ಲಿ ಇಲ್ಲ ಆದರೆ ನಾವು ಹೋದಾಗ ಆ ಮಾಂಸವನ್ನು ಮಂಚದ ಕೆಳಗಡೆ ಇಡಲಾಗಿತ್ತು . ನೀವು ಹಾಜರ ಪಡಿಸಿದ ಪೊಟೊಗಳಲ್ಲಿ ಪಂಚರ , ಪೊಟೊ ಇಲ್ಲ ಎಂದರೆ ಸರಿ . ನನ್ನ ಪ್ರಕಾರ ಗನ್ ಮಂಚದ ಪಕ್ಕದಲ್ಲಿ ಇತ್ತು . ನಿಮ್ಮ ಪ್ರಕಾರ ಗನ್ ಗೆ ಯಾವ ಬಟ್ಟೆ ಸುತ್ತಿದ್ದರು ಎಂದರೆ ಹಳದಿ ಬಣ್ಣದ ತೆಳ್ಳನೆಯ ಬಟ್ಟೆ ಸುತ್ತಿದ್ದರು . ಸದ್ರಿ ಹಳದಿ ಬಣ್ಣದ ಬಟ್ಟೆ ಈಗ ನ್ಯಾಯಾಲಯದ ಮುಂದೆ ಇರುವುದಿಲ್ಲ. ನಾನು ದಾಳಿಗೆ ಹೋದೆನು ಎಂದು ಹೇಳಲಾದ ಸಮಯದಲ್ಲಿ ಆ ಗನ್ ವನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿರುತ್ತೇನೆ . ಮಾಂಸವನ್ನು ಬೇಯಿಸಿದ ನಂತರ ಅದು ಕುರಿ ಮಾಂಸವೊ ಕಾಡು ಪ್ರಾಣಿಗಳ ಮಾಂಸವೊ ಎಂದು ಗೊತ್ತಾಗುವುದಿಲ್ಲ ಎಂದರೆ ಸರಿ . ನನ್ನ ಪ್ರಕಾರ ಪಂಚನಾಮೆಯನ್ನು ಮದ್ಯಾಹ್ನ 12–30 ರಿಂದ ಮಾಡಿರುತ್ತೇವೇ . ಅಷ್ಟು ಪಂಚನಾಮೆಯನ್ನು ಮನೆಯಲ್ಲಿಯೇ ಮಾಡಿರುವುದಿಲ್ಲ. ಮೊದಲು ಪಂಚನಾಮೆಯನ್ನು ಮನೆಯಿಂದ ಪ್ರಾರಂಭಸಿರುತ್ತೇವೆ

ನಂತರ ಹಾಗೆಯೆ ಪಂಚನಾಮೆ ಕ್ರಮ ಮುಂದುವರೆದಿರುತ್ತದೆ. ಮನೆಯಲ್ಲಿ ಎಷ್ಟು ಗಂಟೆಗೆ ಪಂಚನಾಮೆ ಬರೆದು ಮುಗಿಸಲಾಗಿರುತ್ತದೆ ಎಂದು ನನಗೆ ನೆನಪಿಲ್ಲ . ಪಂಚನಾಮೆ ಬರೆಯಲು ಪ್ರಾರಂಭಸಿದ ಬಳಿಕ ಎಷ್ಟು ಗಂಟೆ ವರೆಗೆ ಆ ಮನೆಯಲ್ಲಿ ಇದ್ದೆವು ಎಂದು ನನಗೆ ನೆನಪಿಲ್ಲ . ಜಿಂಕೆಯ ಯಾವ ಭಾಗಕ್ಕೆ ಗುಂಡು ತಾಗಿದ ಗುರುತು ಬಿದಿತ್ತು ಎಂದರೆ ನಾನು ಅದರ ಚರ್ಮ ಮಾತ್ರ ನೋಡಿರುತೆತೇನೆ ಮತ್ತು ಅದಕ್ಕೆ ಗುಂಡು ತಗಲಿದ ಬಗ್ಗೆ ಕಾಣುತ್ತಿತ್ತು ಅದನ್ನು ಹೊರತು ಪಡಿಸಿ ಅದು ಜಿಂಕೆಯ ಯಾವ ಭಾಗದ್ದು ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ . ಯಾವುದೆ ಕಾಡು ಪ್ರಾಣಿಯು ಸತ್ತಿದೆ ಎಂದಾದರೆ ಅದು ಹೇಗೆ ಸತ್ತಿದೆ ಎಂಬ ಬಗೆಗ ಅಂದರೆ ಗುಂಡು ತಗಲಿ ಸತ್ತಿರುತ್ತದೆಯಾ ಅಥವಾ ಹೇಗೆ ಸತ್ತಿರುತ್ತದೆ ಎಂದು ನಿಖರವಾಗಿ ನೀವು ಮಾಹಿತಿ ಕೊಡಬೇಕಾಗುತ್ತದೆ ಎಂದರೆ ಸರಿ . ಅದು ಎಷ್ಟು ಅಗಲದ ತೂತಾಗಿತ್ತು ಎಂದರೆ ಅಂದಾಜು 1 ಇಂಚು ವಾಗಿರಬಹುದು . ಎಷ್ಟು ತೂತು ಆಗಿದ್ದವು ಎಂದರೆ ನನ್ನ ಪ್ರಕಾರ ಚರ್ಮ ದ ಮೇಲೆ ಒಂದು ಗುಂಡು ತಗಲಿರುವುದು ಕಂಡಿರುತ್ತದೆ . ನಾನು ನಂತರದಲ್ಲಿ ಮನೆಯಿಂದ ಮೆಣಸಿನ ಗದ್ದೆ ಕಡೆಗೆ ಹೋಗಿರುತ್ತೇನೆ . ಮೆಣಸಿನ ಗದ್ದೆ ಕಡೆ ಹೋಗಿ ತಲುಪಲು ಎಷ್ಟು ಗಂಟೆ ಆಗಿರುತ್ತದೆ ಎಂದು ಸಮಯ ನೆನಪಿಲ್ಲ . ನಿಪಿ-8 ಮತ್ತು 9 ರಲ್ಲಿರುವ ಕಾಣುವ ಪೊಟೊ ಮೂಲ ಪೊಟೊ ಗಳು ಅಲ್ಲ ಎಂದರೆ ಸರಿಯಲ್ಲ . ಅವುಗಳನ್ನು ಪ್ರಕರಣಕ್ಕೆ ಅನೂಕೂಲವಾಗುವಂತೆ ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ . ಹೆಬ್ಬುಳ ಗ್ರಾಮದ ಜನರು ಅರಣ್ಯವನ್ನು ಅತಿಕ್ರಮಣ ಮಾಡಿಕೊಂಡು ಸುಮಾರು 40-50 ವರ್ಷಗಳಿಂದ ಅಲ್ಲಿಯೇ ವಾಸಿಸುತ್ತಿದ್ದು ಅವರು ಅದನ್ನು ಸಕ್ರಮ ಮಾಡಿ ಕೊಡಬೇಕು ಎಂದು ಸರಕಾರ ಮತ್ತು ನಿಮ್ಮ ಇಲಾಖೆ ವಿರುದ್ಧ ಹೋರಾಟ ಮಾಡುತ್ತಿದ್ದಾರೆ ಎಂದರೆ ಸರಿ . ಆ ರೀತಿ ಹೊರಾಟದಲ್ಲಿ 1 ರಿಂದ 3 ಆರೋಪಿಗಳು ಮಂಚೂಣಿ ಸ್ಥಾನದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ ಎಂದರೆ ಸರಿಯಲ್ಲ . ಅವರು ಮಂಚೂಣಿ ಸ್ಥಾನದಲ್ಲಿ ಆ ರೀತಿಯಾದ ಹೊರಾಟ ಮಾಡುತ್ತಿರುವುದರಿಂದ ನಿಮ್ಮ ಇಲಾಖೆಗೆ ಅವರ ಮೇಲೆ ಸಿಟ್ಟು ಇರುತ್ತದೆ ಎಂದರೆ ಸರಿಯಲ್ಲ .

7. ಪಂಚನಾಮೆಯಲ್ಲಿ ಹೇಳಿದಂತೆ ಇಂತಿಂಥವರ ಮನೆ ಇರುತ್ತದೆ ಎಂದು ಕಾಣಿಸಿರುತ್ತೀರಿ ಅವರನ್ನು ಪಂಚರನ್ನಾಗಿ ಸ್ವತಂತ್ರ ಸಾಕ್ಷಿದಾರರನ್ನಾಗಿ ಈ ಪ್ರಕರಣದಲ್ಲಿ ಪಡೆದುಕೊಂಡಿರುತ್ತಿರಾ ಎಂದರೆ ಇಲ್ಲ . ಏಕೆಂದರೆ ಸುತ್ತಮುತ್ತಲೂ ಇರುವ ಜನರು ಪಂಚನಾಮೆಗೆ ಸಾಕ್ಷಿದಾರಾಗಲು ತಯಾರು ಇರಲಿಲ್ಲ . ಈ ವಿಷಯವನ್ನು ನೀವು ಸುಳ್ಳಾಗಿ ಹೇಳುತ್ತಿದ್ದೀರಿ ಆ ದಿನ ನೀವು ದಾಳಿಗೆ ಹೋದ್ದದ್ದು ಇಲ್ಲ ಮತ್ತು ಪಂಚನಾಮೆ ಅಲ್ಲಿ ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ

8. ಪಂಚರಾದ ಚಾಸಾ 3-4 ರವರಿಗೆ ಪಂಚನಾಮೆಗೆ ಬರಬೇಕು ಎಂದು ಯಾವುದು ನೋಟಿಸನ್ನು ಕೊಟ್ಟದ್ದು ಇಲ್ಲ . 2 ನೆ ಆರೋಪಿ ಮನೆಗೆ ನಾನು ಆ ದಿನ ಹೋಗಿದ್ದೆ . ಆತನ ಮನೆಗೆ ಹೋಗಿದ್ದೆವು ಎಂದು ಹೇಳಿದಂತೆ ಹೋಗುವ ಪೂರ್ವದಲ್ಲಿ ಶೊಧನಾ ವಾರಂಟ ವನ್ನು ಪಡೆದುಕೊಂಡಿಲ್ಲ . . ನಾವು ಹೋದಾಗ ಅತನ ಮನೆಗ ಚಾವಿ ಹಾಕಲಾಗಿತ್ತು . ಮನೆಗೆ ಹೋಗುವಾಗ ಅದಕ್ಕಿಂತ ಪೂರ್ವದಲ್ಲಿ ಶೊಧನಾ ವಾರಟಂ ಪಡೆಯಬೇಕು ಎಂಬ ಮಾಹಿತಿ ನನಗೆ ಇರುತ್ತದೆ ಸಾಕ್ಷಿ ಪುನಃ ಮುಂದುವರೆದು 1 1 ನೆ ಆರೋಪಿ ಮನೆಗೆ ಶೊಧನಾ ವಾರಂಟ ದೊಂದಿಗೆ ಹೋದಾಗ 1 ನೆ ಆರೋಪಿಯು 2 ನೆ ಅರೋಪಿ ಹೆಸರನ್ನು ಹೇಳಿದ್ದರಿಂದ 2 ನೆ ಆರೋಪಿ ತಪ್ಪಿಸಿಕೊಳ್ಳುವ ಸಾಧ್ಯತೆ ಇರುವ ಕಾರಣದಿಂದ 2 ನೆ ಆರೋಪಿ ಮನೆಗೆ ಹೋಗುವಾಗ ಶೊಧನಾ ವಾರಂಟ ಪಡೆದುಕೊಂಡಿಲ್ಲ . 2 ನೆ ಆರೋಪಿ ಮನೆಗೆ ಬಿಗ ಹಾಕಿದ್ದರು ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . ನೀವು ಆ ದಿನ 2 ನೆ ಆರೋಪಿಗೆ ಮನೆಗೆ ಹೋಗಲಿಲ್ಲ ಎಂದರೆ ಸರಿಯಲ್ಲ . ನ್ಯಾಯಾಲಯದ ಮುಂದೆ ಇರುವ ಸ್ಟೀಲ್ ಪಾತ್ರೆ ಪರಿಕರಗಳು ನಿಮ್ಮ ಮನೆಯಲ್ಲಿ ನಿಮ್ಮ ಇಲಾಖೆಯ ಸಿಬ್ಬಂದಿಯಯ ಮನೆಯಲ್ಲಿ ಹಾಗೂ ಮಾರುಕಟ್ಟೆಯಲ್ಲಿ ಸಿಗುತ್ತದೆ ಎಂದರೆ ಸರಿ . ಅದೇ ರೀತಿ ಹೆಡ್ ಟಾರ್ಚ ಕೂಡ ಮಾರುಕಟ್ಟೆಯಲ್ಲಿ ಸಾಮಾನ್ಯವಾಗಿ ಸಿಗುತ್ತದೆ ಎಂದರೆ ಸರಿ . ನ್ಯಾಯಾಲಯದ ಮುಂದೆ ಇರುವ ಈ ರೀತಿಯ ಕತ್ತಿಯನ್ನು ನೀವು ಅರಣ್ಯಕ್ಕೆ ಹೋಗುವಾಗ ಉಪಯೊಾೀಗಿಸುತ್ತಿರಿ ಎಂದರೆ ಸರಿ . 2 ನೆ ಅರೋಪಿಯು ಚಾಕು ವನ್ನು ತೆಗೆದು ಕೊಂಡು ಹೋಗಿದ್ದ ಎಂಬ ಬಗ್ಗೆ ಆತನಿಂದ ಆ ಚಾಕುವನ್ನು ವಶಕ್ಕೆ ಪಡೆದುಕೊಂಡಿರುತ್ತಿರಾ

ಎಂರೆ ಆ ರೀತಿಯಾದ ಚಾಕುವನ್ನು 2 ನೆ ಅರೋಪಿ ತೆಗೆದುಕೊಂಡು ಹೋಗಿದ್ದ ಎಂದು 1 ನೆ ಅರೋಪಿ ನನ್ನ ಬಳಿ ಹೇಳಿದ್ದು 2 ನೆ ಆರೋಪಿ ನನ್ನ ವಶಕ್ಕೆ ಸಿಕ್ಕಿಲ್ಲ ಅತನು ನಾಪತ್ತೆ ಯಾಗಿದ್ದ ಆತನ ವಿಚಾರಣೆಯನ್ನು ತನಿಖಾಧಿಕಾರಿ ಮಾಡಿರುತ್ತಾರೆ ಅದರ ಬಗೆಗ ತನಿಖಾಧಿಕಾರಿಗೆ ಗೊತ್ತು . ಸದ್ರಿ 2 ನೆ ಅರೋಪಿ ತೆಗೆದುಕೊಂಡು ಹೋದ ಎನ್ನುವ ಚಾಕು ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ . ನೀವು ಜಪ್ತು ಪಡಿಸಿದೆವು ಎಂದು ಹೇಳಲಾದ ಮುದ್ದೆಮಾಲುಗಳನ್ನು ಚಾರ್ಜ ಶೀಟ ದೊಂದಿಗೆ ಹಾಕಿದ್ದು ಇಲ್ಲ ಎಂದರೆ ಜಪ್ತು ಪಡಿಸಿದ ಸ್ವತ್ತು ಗಳನ್ನು ನಾವು ವಲಯ ಕಚೇರಿಗೆ ತಲುಪಿಸಿರುತ್ತೇನೆ . ಮುಂದಿನ ವಿಷಯ ತನಿಖಾಧಿಕಾರಿಗೆ ಬಿಟ್ಟದ್ದು ನನಗೆ ಅದರ ಬಗ್ಗೆ ಗೊತ್ತಿಲ್ಲ . ಸದಿರ ಇದೇ ಸ್ವತ್ತು ಪಟ್ಟಿ ಎನ್ನುವ ಬಗ್ಗೆ ತನಿಹಾಧಿಕಾರಿಗೆ ಬಿಟ್ಟದ್ದು ಅದು ನಿಮ್ಮ ವ್ಯಾಪ್ತಿಗೆ ಬರುವುದಿಲ್ಲ ಹಾಗಾಗಿ ನಿಮಗೆ ಆ ಸ್ವತ್ತುಗಳನ್ನು ಹಾಜರ ಪಡಿಸಲು ಬರುವುದಿಲ್ಲ ಎಂದರೆ ತನಿಖಾಧಿಕಾರಿಗಳ ಅದೇಶದ ಮೇರೆಗೆ ಆ ಸ್ವತ್ತುಗಳನ್ನು ನಾನು ನ್ಯಾಯಾಲಯದ ಮುಂದೆ ಹಾಜರ ಪಡಿಸಿರುತ್ತೇನೆ . ಆ ರೀತಿಯಾಗಿ ನಾನು ನ್ಯಾಯಾಲಯದ ಮುಂದೆ ಸುಳ್ಳು ಹೆಳುತ್ತಿದ್ದೆನೆ ಮೂಲ ಸ್ವತ್ತು ಪಟ್ಟಿ ಯಾವುದು ಇಲ್ಲ ಅವುಗಳನ್ನು ವಶಪಡಿಸಿಕೊಂಡದ್ದು ಇಲ್ಲ ಎಂದರೆ ಸರಿಯಲ್ಲ . ಪ್ರಕರಣವನ್ನು ಅಂಕಿಅಂಶಕೋಸ್ಕರ ಸೃಷ್ಟಿಸುವುದಕೊಸ್ಕರ ಪ್ರಕರಣ ಸೃಷ್ಟಿ ಮಾಡಿ ಆ ನಂತರದಲ್ಲಿ ಸ್ವತ್ತಿನ ಪಟ್ಟಿಯಲ್ಲಿ ಹಾಜರ ಪಡಿಸಿರುತ್ತೀರಿ ಎಂದರೆ ಸರಿಯಲ್ಲ . ಜಿಂಕೆ ಹೊಡೆದರು ಎಂದು ಹೇಳಲಾದ ಸ್ಥಳಕ್ಕೆ ನೀವು ಹೋದಾಗ ಎಷ್ಟು ಗಂಟೆ ಯಾಗಿತ್ತು ಎಂದರೆ ನನಗೆ ಸಮಯ ನೆನಪಿಲ್ಲ . ನನ್ನ ಬಳಿ ಆ ಸಮಯದಲ್ಲಿ ವಾಚ್ ಇತ್ತು . ಚರ್ಮ ಹಾಗೂ 4 ಕಾಲುಗಳನ್ನು ಪ್ಲಾಸ್ಟಿಕ ಚೀಲದಲ್ಲಿ ವಶ ಪಡಿಸಿಕೊಳ್ಳಲಾಯಿತು ಎಂಬ ಬಗ್ಗೆ ಆ ಪ್ಲಾಸ್ಟಿಕ ಚೀಲವನ್ನು ನ್ಯಾಯಾಲಯದ ಮುಂದೆ ಹಾಜರ ಪಡಿಸಿದ್ದಿರಾ ಎಂದರೆ ಆ ದಿನ ನಾವು ಪ್ಲಾಸ್ಟಿಕ ಚಿಲವನ್ನು ವಶಪಡಿಸಿಕೊಂಡಿಲ್ಲ ಆ ಕಾಡುಪ್ರಾಣಿ ಚರ್ಮ ಮತ್ತು 4 ಕಾಲುಗಳನ್ನು ಈ ಚೀಲದಲ್ಲಿ ಇದ್ದು ಚೀಲವನ್ನು ಹೊರತು ಪಡಿಸಿ ಆ ಕಾಡುಪ್ರಾಣಿಯ ಚರ್ಮ ಮತ್ತು 4 ಕಾಲುಗಳನ್ನು ವಶಪಡಿಸಿಕೊಂಡಿರುತ್ತೇವೆ . ಆ ರಿತಿಯಾಗಿ ನೀವು ಪ್ಲಾಸ್ಟಿಕ ಚೀಲದಲ್ಲಿದ್ದ ಕಾಡು

ಪ್ರಾಣಿಯ ಚರ್ಮ ಮತ್ತು 4 ಕಾಲುಗಳನ್ನು ವಶಪಡಿಸಿಕೊಡದ್ದು ಇಲ್ಲ ಆ ಕಾರಣದಿಂದ ನೀವು ಆ ಪ್ಲಾಸ್ಟಿಕ ಚೀಲವನ್ನು ನ್ಯಾಯಾಲಯಂದ ಮುಂದೆ ಹಾಜರ ಪಡಿಸಿಲ್ಲ ಎಂದರೆ ಸರಿಯಲ್ಲ .

( ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.